ಆದ್ದರಿಂದ ಜಿಲ್ಲಾಮಟ್ಟದ ಅಗ್ರಿಕಲ್ಚರ್ ಆಫೀಸರ್ ಯಾರು ಇದ್ದಾರೆ ಅವರು ಸುಣ್ಣವನ್ನು ಸಪ್ಲೈ ಮಾಡಿದರೆ ಅನುಕೂಲವಾಗುತ್ತದೆ. ಆಯಾ ಜಿಲ್ಲೆಯಲ್ಲಿಯೇ ಕ್ಲುಪ್ತಕಾಲದಲ್ಲಿ ರೈತರಿಗೆ ಸಿಗುವ ಹಾಗೆ ವ್ಯವಸ್ಥೆ ಮಾಡುತ್ತಿರಾ?.

ಶ್ರೀ ಆರ್. ಗುಂಡೂರಾವ್.—ಒಳ್ಳೆಯ ಸಲಹೆ, ನೋಡೋಣ.

ಶ್ರೀ ಬಿ.ವಿ. ಕಕ್ಕಿಲಾಯ.—ನಮ್ಮ ಜಿಲ್ಲೆಯಲ್ಲಿ ವಿಪರೀತ ಮಳೆ ಇರುವುದರಿಂದ ಭೂಸಾರ ಬಹಳ ಕಡಿಮೆ. ಪ್ರತಿ ವರ್ಷ ಭೂಸಾರ ಹೋಗುತ್ತದೆ, ಮುಖ್ಯವಾಗಿ ಕ್ಯಾಲ್ಸಿಯಂ ಬಹಳ ಕಡಿಮೆ ಇರುವಂತಹ ಜಿಲ್ಲೆ. ಕರಾವಳಿ ಪ್ರದೇಶವಾದ ನಮ್ಮ ಜಿಲ್ಲೆಯಲ್ಲಿಯೇ ಸುಣ್ಣವನ್ನು ಒದಗಿಸಲು ಅನುಕೂಲ ಇದೆ. ಪ್ರಧಾನ ಕೃಷಿ ಅಧಿಕಾರಿಗಳಿಗೆ ಮತ್ತು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ರವರಿಗೆ ನಮ್ಮ ಜಿಲ್ಲೆಗೆ ವಿಶೇಷ ಗಮನಕೊಡುವುದಕ್ಕೆ ತಾವು ದಯಮಾಡಿ ಆದೇಶ ಕೊಡುತ್ತೀರಾ?.

ಶ್ರೀ ಆರ್. ಗುಂಡೂರಾವ್.—ನಾನು ಕರೆಸಿ ಮಾತನಾಡಿ, ಸೂಕ್ತಕ್ರಮ ಕೈಗೊಳ್ಳುತ್ತೇನೆ.

ಶ್ರೀ ಕಾಪು ಸಂಜೀವಶೆಟ್ಟಿ.—ಸುಣ್ಣದ ಕೊರತೆಯಿಂದ ನಮ್ಮ ಜಿಲ್ಲೆಯಲ್ಲಿ ಬೆಳೆ ಕಡಿಮೆ ಬರುತ್ತದೆ. ಸುಣ್ಣದ ಕೊರತೆಯಿಂದ ಕ್ರಿಮಿಕೀಟ ಜಾಸ್ತಿಯಾಗುತ್ತವೆ. ಕೇವಲ ೧೦ ಪರ್‌ಸೆಂಟ್ ಸಪ್ಲೈ ಮಾಡುವುದರಿಂದ ಸಣ್ಣ ರೈತರಿಗೆ ಆ ಸವಲತ್ತುಗಳು ಸಿಕ್ಕುತ್ತಿಲ್ಲ. ನಿಮಗೆ ಸಣ್ಣ ರೈತರಿಗೆ ಸಿಗುವ ಹಾಗೆ ಮಾಡಲು ಸಾಧ್ಯವಾಗದಿದ್ದರೆ, ಮಾನ್ಯ ಪೊಪ್ಪಿದ್ದೀನ್‌ರವರು ಹೇಳಿದ ಹಾಗೆ ಸುಣ್ಣ ವಿತರಣೆ ಮಾಡತಕ್ಕದ್ದನ್ನು ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಕೊಡುವ ವ್ಯವಸ್ಥೆ ಮಾಡುತ್ತೀರಾ? ಅಥವಾ ಬೇರೆ ಇನ್ನಾವ ಕ್ರಮ ತೆಗೆದು ಕೊಳ್ಳುತ್ತೀರಿ.

ಶ್ರೀ ಆರ್. ಗುಂಡೂರಾವ್.—ತಮ್ಮ ಜಿಲ್ಲೆಯಲ್ಲಿ ಸುಣ್ಣದ ಕೊರತೆ ಇದೆ, ಆ ಕೊರತೆಯನ್ನು ತಪ್ಪಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಆದನ್ನು ಕೈಗೊಳ್ಳುತ್ತೇನೆ.

**Administration in Bangalore City Corporation under K. M. C. Act 1976.**

266. SRI A. LAKSHMISAGAR (Chickpet)—Will the Minister for Housing and Urban development be pleased to state:—

(*a*) whether appointments and promotions have been made in accordace with the provisions of Section 82 of KMC Act 1976 and Rules thereun ssionerthe posts of the Heads of Department like the Deputy Commi *the* M s. Revenue Officers, Health Officers, Chief Engineers, etc.. in unicipal Corporation of the City of Bangalore ;

(*b*) whether it is a fact that such appointments and promotions now made are not in accordance with Law and if so, what action the Government proposes to take to rectify the illegalities committed?

SRI DHARAM SINGH NARAYAN SINGH (Minister for Housing and Urban Development).—

(*a*) Yes.

(*b*) Does not arise in view of reply at (*a*) above.

SRI A. LAKSHMISAGAR.—Sir, under section 82 of the Karnataka Municipal orporation Act the following officers are to be appointed from out of the State Civil Services. The officers are the Chief Engineer, the Health Officer the Revenue Officer the Chief Accounts Officer, the Council Secretary. I should like to know from the hon;

Minister whether the Revenue Officers are appointed in accordance with Section 82 of this Act ?

ಶ್ರೀ ಧರ್ಮಸಿಂಗ್.—ಅಧ್ಯಕ್ಷರೇ, ಸೆಕ್ಷನ್ ೮೨ರಲ್ಲಿ ಹೆಲ್ತ್ ಆಫೀಸರ್ ಚೀಫ್ ಇಂಜೀನಿಯರ್ ಇತರ ಅಧಿಕಾರಿಗಳನ್ನು ನೇಮಕ ಮಾಡಲಿಕ್ಕೆ ಸರ್ಕಾರಕ್ಕೆ ಅಧಿಕಾರ ಇದೆ. ಅದೇರೀತಿ ರೆವಿನ್ಯೂ ಅಧಿಕಾರಿಗಳನ್ನು ಕೂಡ ನೇಮಕ ಮಾಡಲಿಕ್ಕೆ ಅಧಿಕಾರ ಇದೆ. ಈಗಿರತಕ್ಕ ರೆವಿನ್ಯೂ ಆಫೀಸರ್ ನೇಮಕ ಮಾಡಲು ಬೆಂಗಳೂರು ಕಾರ್ಪೊರೇಷನ್ ಆಕ್ಟ್‌ನಲ್ಲಿ ತಿದ್ದುಪಡಿ ಮಾಡಬೇಕಾಗಿದೆ ಈಗ ಒಬ್ಬ ರೆವಿನ್ಯೂ ಆಫೀಸರ್ ಇದ್ದಾರೆ, ಒಬ್ಬರು ಐ.ಎ.ಎಸ್.ಸದರು ಇದ್ದಾರೆ, ಒಬ್ಬರು ಕೆ.ಎ.ಎಸ್.ನವರು ಇದ್ದಾರೆ. ಆಡಳಿತಾಧಿಕಾರಿಗಳ ಹುದ್ದೆಯನ್ನು ಅಬಾಲಿಷ್ ಮಾಡಿ ಜಿಲ್ಲಾಧಿಕಾರಿ ಮಟ್ಟಕ್ಕೆ ಅಪ್‌ಗ್ರೇಡ್ ಮಾಡಿದ್ದೇವೆ ಅದು ಗೌರ್ನಮೆಂಟ್‌ಗೆ ಬಂದಿದೆ. ಅದರ ಬಗ್ಗೆ ವಿಚಾರಮಾಡುತ್ತೇನೆ.

SRI A. LAKSHMISAGAR —The fact is that the appointment of Revenue Officers is in contravention of Section 82. Why the Government did it? And how the Government is allowing this infraction of Section 82? Amendment of the Corporation act is a different thing. When it comes, let us see. But, since implementation of this Act in the year 1977 the Revenue Officer's post has been created in contravention of the provisions of this Act. Since 1977 the Revenue Officer's post must be held by an officers of the State Civil Services. He must be from among the officers from I.A.S. or K.A.S. or K M S. (Karnataka Municipal Services). It has not been done. Why you did this illegality in the appointment of this Revenue Officer? There is not one. There are four or five such Revenue Officers. Why you have done it? What is the interest ?

ಶ್ರೀ ಧರ್ಮಸಿಂಗ್.—ಈಗಿರತಕ್ಕ ಸಮಯದಲ್ಲಿ ಕಾರ್ಪೊರೇಷನ್‌ರವರು ಕೂಡ ರೆಸಲ್ಯೂಷನ್ ಪಾಸ್ ಮಾಡಿ ಕಳುಹಿಸಿದ್ದಾರೆ. ಸೀನಿಯರ್ ಆಫೀಸರ್‌ಗೆ ಕೊಡಬೇಕೆಂದು ಮಾಡಿದ್ದೇವೆ. ಇನ್‌ಚಾರ್ಜ್ ಅರೆಂಜ್‌ಮೆಂಟ್ ಪ್ರಮೂಷನ್ ಮಾಡಿದ್ದೇವೆ. ಅದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಅದು ಪರಿಶೀಲನೆಯಲ್ಲಿದೆ.

SRI A. LAKSHMISAGAR. —He is discharging the function of the Revenue Officer. The Minister is answering and he must take the responsibility on himself. He must check up with the Officer, the person who supplied this false information to the Minister. He must take action against them and he must also equally hold himself responsible. This answer is not satisfactory. The term of the Corporation came to an end in the first week of January 1975. Irrespective of the resolution of the Corporation prior to its term being extended why you have appointed a Revenue Officer in contravention of Section 82 ? I tell you, not one. If this is so, why similar concession is not being extended in the case of the Health Officer, in the case of the Council Secretary, in the case of other officers who are also officers which can be filled up from out of the State Civil Services. There are certain very eminent competent persons in the Corporation itself hungering for promotion. Why have you not extended similar concession or illegality? Why are you doing it? What is the reason? This is not a satis-

factory answer. Some action must be taken or the Minister must hold himself responsible.

ಶ್ರೀ ಧರ್ಮಸಿಂಗ್.—ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದ್ದೇನೆ. ಕೆ.ಎಂ.ಸಿ, ಆ್ಯಕ್ಟ್ ಪ್ರಕಾರ ಹೆಲ್ತ್ ಆಫೀಸರ್, ಚೀಫ್ ಇಂಜಿನಿಯರ್, ಡಪ್ಯುಟಿ ಕಮಿಷನರ್‌ಗೆ ಅಲ್ಲಿ "Shall" ಅಂತ ವರ್ಡ್ ಯೂಸ್ ಮಾಡಿದ್ದೇವೆ. ಗವರ್ನ್‌ಮೆಂಟ್‌ನಿಂದ ಮಾಡತಕ್ಕದ್ದು. ೧೯೭೫ರಲ್ಲಿ ಮಂತ್ರೊಬ್ಬರು ಸೀನಿಯರ್ ರೆವಿನ್ಯೂ ಆಫೀಸರ್‌ಗೆ ಡೆಪ್ಯುಟಿ ಕಮಿಷನರ್ ಎಂದು ಇನ್‌ಚಾರ್ಜ್ ಅರೇಂಜ್‌ಮೆಂಟ್ ಮಾಡಿದ್ದಾರೆ. ಎಕ್ಸ್‌ಟೆಂಗ್ ಕೆ. ಸಿ. ಸಿ. ಅಂಡ್ ಆರ್ ರೂಲ್ಸ್‌ನಲ್ಲಿ ಪ್ರೊವೈಡ್ ಮಾಡಿದ್ದಾರೆ. ಯಾವಾಗ ಈ ಪ್ರಶ್ನೆ ಬಂದರೂ ಕೂಡ ಅಲ್ಲಿರತಕ್ಕ ಸೀನಿಯರ್ ಆಫೀಸರ್‌ಗೆ ಕೊಡಲಾಗಿದೆ. ೧೯೭೫ರಲ್ಲಿ ಈ ತರಹ ತೀರ್ಮಾನ ಕೈಗೊಂಡಿದ್ದಾರೆ. ಆದರ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ. ಇನ್ನೂ ತೀರ್ಮಾನಕ್ಕೆ ಬಂದಿಲ್ಲ. ಈಗ ಮಾನ್ಯ ಸದಸ್ಯರು ಸ್ಪೆಸಿಫಿಕ್ ಆಗಿ ಆಲಿಗೇಷನ್ ಮಾಡುತ್ತಿದ್ದೀರಿ, ಸರ್ಕಾರ ಅದರ ಬಗ್ಗೆ ತೀವ್ರವಾಗಿ ಕ್ರಮ ಕೈಗೊಳ್ಳುತ್ತದೆ ಎಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮಿಸಾಗರ್.—ರೂಲ್ ಅನ್ನರು ರೆಕಮೆಂಡ್ ಮಾಡಿ ಕಳುಹಿಸಿಕೊಟ್ಟಿರತಕ್ಕದ್ದು ಇವರು ಹೇಳುತ್ತಿದ್ದಾರೆ ಯೇ ಹೊರತು ಹಾಲಿ ಫ್ರೇಮ್ ಮಾಡಿರತಕ್ಕದ್ದರ ಬಗ್ಗೆ ಉತ್ತರ ಇಲ್ಲ.

ಶ್ರೀ ಧರ್ಮಸಿಂಗ್.—ಅಧ್ಯಕ್ಷರೆ ಈ ತರಹ ಅವ್ಯವಹಾರ ಆಗಿದೆ ಎಂದು ಪ್ರಸ್ತಾಪ ಮಾಡಿದ್ದಾರೆ. ನಾನು ನೇರವಾಗಿ ಹೇಳಿದ್ದೇನೆ. ೧೯೭೫ರಲ್ಲಿ ಆಗಿದೆ. ಇನ್ನೂ ಕೂಡ ಸರ್ಕಾರದ ಎದುರಿನಲ್ಲಿದೆ. ಈಗ ಸ್ಪೆಸಿಫಿಕ್ ಆಗಿ ಸಮ್ಮೇಷನ್‌ಕ್ಕೆ ಬಂದಿದೆ. ಇನ್ನೂ ಇದರ ಬಗ್ಗೆ ನಿರ್ಣಯ ತೆಗೆದುಕೊಂಡಿಲ್ಲ. ಈ ತರಹ ೧೯೭೫ರಲ್ಲಿ ಸೀನಿಯರ್ ರೆವಿನ್ಯೂ ಆಫೀಸರ್‌ಗೆ ಈ ತರಹ ಇನ್‌ಚಾರ್ಜ್ ಅರೇಂಜ್‌ಮೆಂಟ್ ಏನು ಮಾಡಿದ್ದಾರೆ ಅದು ತಪ್ಪಿರತಕ್ಕ ವಿಷಯವಿದೆ ಎಂದ ಪ್ರಸ್ತಾಪ ಮಾಡಿದ್ದೀರಿ. ಅದರ ಬಗ್ಗೆ ನಾವು ಪರೀಶಿಲನೆ ಮಾಡುತ್ತೇವೆ

## Strength of Employees in Forest Industries Corporation

931. SRI T. B. JAYACHANDRA (Kallambella) :—Will the Minister for Forest and Mines and Geology be pleased to state :—

(a) the total Number of Employees in Forest Industries Corporation, their nature of work and designation ;

(b) the number of Permanent employees and Temporary employees together with the dates of their employment ;

(c) whether the Temporary employees will be absorbed permanently ?

SRI G. MADEGOWDA (Minister for Forest and Mines and Geology).—

(a) There are 603 employees working at present in the Corporation. This includes 30 State Government Employees working on deputation.

In the Industrial Units Employees are mainly concerned with operation and maintenance of machineries including manual labour in handling the materials. The employees attached to the office are concerned with correspondence including maintenance of Accounts. The Staff on Janatha Housing Scheme are put on Supervision of fabrication of doors and windows etc., and their transportation. The